**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ನಾನು ವಾದಿ ಮತ್ತು 2 ನೇ ಪ್ರತಿವಾದಿ ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಈ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನನಗೂ ಭಾಗಾಂಶದ ಹಕ್ಕು ಇದೆ. ವಾದಿಗೂ ಸಹ ಭಾಗಾಂಶದ ಹಕ್ಕು ಇರುತ್ತದೆ. 2ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 25.08.2011 ರಂದು ಉಪನೊಂದಣಾಧಿಕಾರಿ ಕಚೇರಿಗೆ ನಾವೆಲ್ಲರೂ ಹೋಗಿದ್ದೆವು. ಎಲ್ಲಾರಿಗೂ ಆಸ್ತಿಯನ್ನು ಕೊಡುತ್ತೇವೆ ಎಂದು ಹೇಳಿರುತ್ತಾರೆ. ಅದೇ ದಿನ ನನ್ನ ತಾಯಿಯವರು ನೊಂದಾಣಾಧಿಕಾರಿ ಕಚೇರಿಯಲ್ಲಿ ಮೃತ ಪಟ್ಟಿರುತ್ತಾರೆ. ನೊಂದಣಾಧಿಕಾರಿ ಕಚೇರಿಗೆ ಹೋಗುವಾಗ ನನ್ನ ತಾಯಿಗೆ ಪ್ರಜ್ಞೆಗೆ ಇರಲಿಲ್ಲ. ನನ್ನ ತಾಯಿಯನ್ನು ನೊಂದಣಾಧಿಕಾರಿ ಕಚೇರಿಗೆ ಕರೆದು ಕೊಂಡು ಹೋಗಿದ್ದು ಪ್ರತಿವಾದಿ ನಂ. 2. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನಗೆ ಮೆದುಳು ಜ್ವರ ಇತ್ತು ಆದ ಕಾರಣ ನಾನು ಮೆಡಿಕಲ್ ಸರ್ಟಿಫಿಕೇಟನ್ನು ಹಾಜರು ಪಡಿಸಿರುತ್ತೇನೆ. ನಾನು ನನ್ನ ತವರು ಮನೆಯಲ್ಲಿ 30 ವರ್ಷದಿಂದ ವಾಸವಿದ್ದೇನೆ. ಮದುವೆಯಾದಾಗಿನಿಂದಲೂ ತವರು ಮನೆಯಲ್ಲೆ ವಾಸವಿದ್ದೇನೆ. ನನ್ನ ಪತಿ ಮೃತ ಪಟ್ಟಿರುತ್ತೇನೆ. ನನ್ನ ಬಳಿ ಇರುವ ಗುರುತಿನ ಚೀಟಿಗಳು ನನ್ನ ತವರುಮನೆಯ ವಿಳಾಸ ಇದೆ. ನನ್ನ ಪತಿಯ ಅಂತ್ಯಕ್ರಿಯೇ ಕುಂಬೆನಹಳ್ಳಿ ಯಲ್ಲಿ ನಾವು ಅಕ್ಕತಂಗಿಯರು ಸೇರಿ ಮಾಡಿದ್ದೆವು. ವಾದಿ ಅವರ ಅತ್ತೆಯ ಮನೆಯಲ್ಲಿ ವಾಸ ಇದ್ದಾರೆ. ಪ್ರತಿವಾದಿ ನಂ. 2 ರವರು ಕುಂಬೇನಹಳ್ಳಿ ಯಲ್ಲೂ ಬರುತ್ತಾರೆ ಬೆಂಗಳೂರಿನಲ್ಲೂ ಇರುತ್ತಾರೆ. ಬೆಂಗಳೂರಿನಲ್ಲೂ ವಾಸ ಇದ್ದಾರೆ. 2ನೇ ಪ್ರತಿವಾದಿ ಗೃಹಿಣಿ. ಅವರ ಪತಿ ಹೋಟೆಲ್ ಅಲ್ಲಿ ಕೆಲಸ ಮಾಡುತ್ತಾರೆ. ಯಾವುದೇ ಕಾರ್ಯಕ್ರಮ ಇದ್ದಾಗ ಒಟ್ಟಿಗೆ ಸೇರುತ್ತೇವೆ ಎಂದರೆ ಸರಿ. ನನ್ನ

ತಂದೆತಾಯಿಯವರ ಅಂತ್ಯಕ್ರಿಯೆ ಒಟ್ಟಿಗೆ ಸೇರಿ ಊರಿನಲ್ಲಿ ಮಾಡಿರುತ್ತೇನೆ. 2ನೇ ಪ್ರತಿವಾದಿಯ ಪತಿ ಸಂಪಾದನೆ ಮಾಡುತ್ತಿರುವ ಹಣ ಅವರ ಜೀವನಕ್ಕೆ ಸಾಕಾಗುತ್ತದೆ. ಅವರು ಕೆಲಸ ಮಾಡುತ್ತಿದ್ದ ಹೋಟೆಲ್ ಅಲ್ಲಿ ಹಣ ದುರ್ಬಳಕೆ ಮಾಡಿರುತ್ತಾರೆಂದು 3 ತಿಂಗಳ ಕಾಲ ಜೈಲಿಗೆ ಹೋಗಿರುತ್ತಾರೆ. ನನ್ನ ತಂದೆ ತಾಯಿ ಇದ್ದಾಗಲೇ ನಮ್ಮ ಮನೆಯ ವ್ಯವಹಾರವನ್ನು 2ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದು ಅವರು ಕುಟುಂಬದಿಂದ ಬಂದಂತಹ ಆದಾಯದಿಂದ ಬೇರೆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ನನ್ನ ತಾಯಿಯವರು ಬದುಕಿದ್ದಾಗಲೇ 3 ಜನರಿಗೂ ಸಮ ಭಾಗ ಕೊಡಬೇಕು ಎಂದು ಹೇಳಿದ್ದರು. ದಾನಪತ್ರಕ್ಕೆ ನನ್ನ ತಾಯಿಯವರು ಸಹಿಯನ್ನು ಮಾಡಿರುವುದಿಲ್ಲ. ನನ್ನದು ಮತ್ತು ವಾದಿಯ ಮದುವೆ ಗ್ರಾಮದಲ್ಲಿ ಮನೆಯ ಮುಂದೆ ಆಗಿರುತ್ತದೆ ಎಂದರೆ ಸರಿ. 2ನೇ ಪ್ರತಿವಾದಿಯ ಮದುವೆ ಶ್ರವಣಬೆಳಗೊಳದ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. 2ನೇ ಪ್ರತಿವಾದಿಯ ಮದುವೆ ಮಾಡುವಾಗ ನಮ್ಮ ಕುಟುಂಬದ ಜಮೀನನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ವಿಜೃಂಭಣೆಯಿಂದ ಮದುವೆ ಮಾಡಿರುತ್ತಾರೆ. ನನ್ನ ತಂದೆಯ ಊರು ದಡಿಘಟ್ಟ. ಅವರು ಕುಂಬೇನಹಳ್ಳಿಗೆ ಮನೆ ಅಳಿಯನಾಗಿ ಬಂದಿದ್ದರಿಂದ ಅವರು ತಮ್ಮ ಕುಟುಂಬದಿಂದ ಯಾವುದೇ ಹಿಸ್ಸೆ ಪಡೆದಿರುವುದಿಲ್ಲ. ನನ್ನ ತಂದೆಯ ಅಣ್ಣ ಸುಬ್ಬೇಗೌಡರಿಗೆ ಸೇರಿದ ಆಸ್ತಿ ಐಟಂ ನಂ. 9 ಆಗಿರುತ್ತದೆ. ನಮ್ಮ ತಾಯಿ ಬದುಕಿದ್ದಾಗಲೇ 2 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಪತ್ರ ಮಾಡಲಾಗಿರುತ್ತದೆ. ನನ್ನ ತಾಯಿಯವರನ್ನು ನೊಂದಣಾಧಿಕಾರಿ ಕಚೇರಿಯಲ್ಲಿ ಎಳೆದಾಡಿರುತ್ತಾರೆ ಆದ್ದರಿಂದ ವಾದಿಯು ಠಾಣೆಯಲ್ಲಿ 2ನೇ ಪ್ರತಿವಾದಿ ವಿರುದ್ಧ ದೂರನ್ನು ಕೊಡಲು ತಯಾರಿದ್ದರು ಎಂರದೆ ಸರಿ. ಆ ನೊಂದಣಿ ಕಚೇರಿಯಲ್ಲಿ ದೊಡ್ಡ ಗಲಾಟೆ ಉಂಟಾಗಿ ಮಾಧ್ಯಮದಲ್ಲಿ ಬಂದಿರುತ್ತದೆ ಎಂದರೆ ಸರಿ. ಆಗ ಗ್ರಾಮದಲ್ಲಿ ಕೆಲವರು ಪಂಚಾಯಿತಿ ಮಾಡಿ 3 ಜನರಿಗೂ ಸಮ ಭಾಗ ಕೊಡುತ್ತಾರೆ ಎಂದು ಹೇಳಿರುತ್ತಾರೆ. ಈಗ ಕೆಲವು ಆಸ್ತಿಗಳ ಖಾತೆಯನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತಾರೆ. ಸದರಿ ವಿಚಾರ 2-3 ವರ್ಷಗಳ ಹಿಂದೆ

ಗೊತ್ತಾಗಿರುತ್ತದೆ. ದಾವಾ ಸ್ವತ್ತುಗಳು 3 ಜನರಿಗೂ ಸಮ ಭಾಗ ಹಕ್ಕು ಇರುತ್ತದೆ ಇದರ ಬಗ್ಗೆ ನಮ್ಮದೇನು ತಕರಾರು ಇರುವುದಿಲ್ಲ. ಕುಂಬೇನಹಳ್ಳಿಯಲ್ಲಿ ನಾನು ಮತ್ತು 2ನೇ ಪ್ರತಿವಾದಿ ಒಟ್ಟಿಗೆ ಇದ್ದೆವು.

**ಪಾಟಿ ಸವಾಲು ಃ 2ನೇ ಪ್ರತಿವಾದಿ ವಕೀಲರಿಂದ**

ನನ್ನ ತಂದೆ ಮೃತ ಪಟ್ಟು 20 ವರ್ಷ ಆಗಿರುತ್ತದೆ. ದಾವಾ ಐಟಂ ನಂ.1 ರಿಂದ 6 ತಾಯಿಯ ಮನೆಯಿಂದ ಬಂದಿದ್ದು ಎಂದರೆ ಸರಿ. ಅವೆಲ್ಲಾ ನಮ್ಮ ತಾಯಿಯ ಸ್ವಂತ ಆಸ್ತಿ ಎಂದರೆ ಸರಿ. ಈಗ 2ನೇ ಪ್ರತಿವಾದಿಯವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಊರಿನಲ್ಲಿ ಎಲ್ಲಾರು ಹೇಳಿರುತ್ತಾರೆ. ಅವರು ಹೇಗೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ದಾನಪತ್ರ ಆಗಿದ ಬಗ್ಗೆ ಪ್ರತಿವಾದ ಪತ್ರದಲ್ಲಾಗಲಿ ಪ್ರಮಾಣಪತ್ರದಲ್ಲಾಗಲಿ ಹೇಳಿಲ್ಲ. ಊರಿನಲ್ಲಿ ಜನ ನನಗೆ ಹೇಳಿಕೊಟ್ಟಿದ್ದರಿಂದ ನಾನು ವಕೀಲರ ಬಳಿ ಬಂದಿರುತ್ತೇನೆ. ವಕೀಲರು ಏನು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನೊಂದಣಾಧಿಕಾರಿ ಕಚೇರಿಗೆ ನಾನು ನನ್ನ ತಾಯಿ 2ನೇ ಪ್ರತಿವಾದಿ ಹೋಗಿರುತ್ತೇವೆ. ನಂತರ ಕೊನೆಗೆ ವಾದಿ ಬಂದಿರುತ್ತಾರೆ. 25.08.2011 ರಂದು ಕಚೇರಿಗೆ ಹೋಗಿರುತ್ತೇವೆ. ಆ ದಿವಸ ದಾನಪತ್ರ ಆಗಿರುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಹೋಗಿದ ದಿನವೇ ದಾನಪತ್ರ ಆದ ಬಗ್ಗೆ ತಿಳಿದು ಬಂದಿರುತ್ತದೆ. ನನ್ನ ತಾಯಿಯವರು ಸ್ವಇಚ್ಛೆಯಿಂದ ದಾನಪತ್ರವನ್ನು ಬರೆದುಕೊಟ್ಟಿದ್ದು ನನಗಾಗಲಿ ವಾದಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮದುವೆ ಆಗಿ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರು ಕಾನ್ವೆಂಟ್ ನಲ್ಲಿ ಶಿಕ್ಷಕಿಯಾಗಿ 1 ವರ್ಷ ಕೆಲಸ ಮಾಡಿರುತ್ತಾರೆ. ಟೈಲರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ 8 ಮತ್ತು 9 ಅನ್ನು 24.04.2006, 28.10.2006, 25.05.2017 ರಂದು ಕ್ರಯಪತ್ರದ ಮುಖೇನ ಖರೀದಿ ಮಾಡಿರುತ್ತಾರೆ ಎಂದರೆ ಅದು ಅವರ ಸ್ವಂತ ಸಂಪಾದನೆ ಯಿಂದ ಖರೀದಿ

ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಾಯಿ ಬದುಕಿದ್ದಾಗ ನಮ್ಮ ಮನೆಯ ಹಣದಿಂದಲೇ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಕ್ರಯಕ್ಕೆ ಕೊಂಡಾಗ 2ನೇ ಪ್ರತಿವಾದಿಗೆ ಮದುವೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ ಸ್ವತ್ತನ್ನು ಕಬಳಿಸಬೇಕೆಂದು ನಾನು ವಾದಿಯರೊಂದಿಗೆ ಷರಿಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ನನ್ನ ತಾಯಿಯವರ ಯೋಗಕ್ಷೇಮವನ್ನು ನೋಡಿಕೊಳ್ಳುತಿದ್ದರು ಎಂದರೆ ಅವರು ಅಲ್ಲಿಯೂ ಇರುತ್ತಿದ್ದರು ಇಲ್ಲಿಯೂ ಇರುತಿದ್ದರೂ ತಾಯಿಗಾಗಿ ಅವರು ಜಾಸ್ತಿ ಖರ್ಚು ಮಾಡಿರುವುದಿಲ್ಲ. 2ನೇ ಪ್ರತಿವಾದಿ ನನ್ನ ತಾಯಿಯ ಯೋಗಕ್ಷೇಮ ನೊಡಿಕೊಂಡಿದ್ದರಿಂದ ನನ್ನ ತಾಯಿಯವರು ಸ್ವಇಚ್ಛಾಯಿಂದ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ವಾದಿಯೇ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಅದರಿಂದ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ